ಕುಂದಾಪುರ ಹಾಗೂ ಮಂಡ್ಯೇಶ್ವರದ ಮಧ್ಯದಲ್ಲಿ ವಿದ್ಯುತ್ ಉಪ-ಕೇಂದ್ರ ಸ್ಥಾಪಿಸುವ ಬಗ್ಗೆ

೧೪೯ (೫೭೮ ಡಿ) ಶ್ರೀ ಜಿ. ಎಸ್. ಆಚಾರ್ (ಬೈಂದೂರು).—ಮಾನ್ಯ ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ದಕ್ಷಿಣ ಕನ್ನಡದ ಕುಂದಾಪುರದಿಂದ ಉತ್ತರ ಕನ್ನಡದ ಮಂಡ್ಯೇಶ್ವರದ ಮಧ್ಯೆ ವಿದ್ಯುತ್ ಉಪ ಕೇಂದ್ರ ಇಲ್ಲದ ಪ್ರಯುಕ್ತ ನಾವುಂದ, ಬೈಂದೂರು, ಶಿರೂರು, ಭಟ್ಕಳ ಭಾಗಗಳಲ್ಲಿ ವಿದ್ಯುತ್ ಪ್ರವಾಹ ಅತ್ಯಂತ ಕಡಿಮೆ ಇದ್ದು ನಿವಾಸಿ ಗ್ರಾಹಕರಿಗೂ, ರೈತರಿಗೂ ಚಿಕ್ಕ ಉದ್ದಿಮೆದಾರರಿಗೂ ಬಹು ಕಾಲದಿಂದ ತುಂಬ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಬೈಂದೂರಿನಲ್ಲಿ ಸದರಿ ಕೇಂದ್ರವನ್ನು ಸ್ಥಾಪಿಸಲಾಗುವುದೇ, ಹಾಗಿದ್ದಲ್ಲಿ, ಯಾವಾಗ ಕಾರ್ಯಾರಂಭವಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು).—

ಅ) ಬಂದಿದೆ.

ಆ) ಇದು ಪರಿಶೀಲನೆಯಲ್ಲಿದೆ.

ಶ್ರೀ ಜಿ. ಎಸ್. ಆಚಾರ್.—ಅಧ್ಯಕ್ಷರೇ, ವಿದ್ಯುತ್ ಪ್ರವಾಹ ಬಹಳ ಕಡಿಮೆ ಇರುವುದರಿಂದ ನಮ್ಮ ಕಡೆಯ ೧೫-೨೦ ಗ್ರಾಮಗಳಿಗೆ ಬಹಳ ತೊಂದರೆಯಾಗಿದೆ. ಅದೇ ಸಂದರ್ಭದಲ್ಲಿ ರೈತರಿಗೆ, ಸಣ್ಣ ಉದ್ದಿಮೆಗಳವರಿಗೆ ಕೂಡ ತೊಂದರೆಯಾಗಿದೆ. ಹೋದ ವರ್ಷ ನಾನು ಕೇಳಿದ್ದಕ್ಕೆ ಆದಷ್ಟು ಬೇಗ ಸ್ಥಾಪಿಸುವುದಾಗಿ ಆಶ್ವಾಸನೆ ಬಂದಿತ್ತು. ಈ ವರ್ಷ ಇನ್ನೂ ಪರಿಶೀಲನೆಯಲ್ಲಿದೆ ಎಂದು ಉತ್ತರ ಬಂದಿದೆ. ಈಗಲಾದರೂ ಆದಷ್ಟು ಬೇಗನೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಆ ಭಾಗದಲ್ಲಿ ಮಾನ್ಯ ಸದಸ್ಯರು ಹೇಳಿರುವ ಫ್ಲಡ್ ಸಮಸ್ಯೆ ಇರುವುದು ನಿಜ. ನಾವುಂದ ಬಳಿ ಸಬ್‌ಸ್ಟೇಷನ್ ಮಾಡುವ ವಿಚಾರವನ್ನು ಅದಕ್ಕಾಗಿಯೇ ನಾವು ತೆಗೆದುಕೊಂಡಿದ್ದೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕೈಗಾ ಅಣು ವಿಜ್ಞಾನ ಕೇಂದ್ರದ ಬಗ್ಗೆ

೧೮೦ (೩೩೬) ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ವಾಣಿಜ್ಯ, ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯೆಯಿಟ್ಟು ಉತ್ತರಿಸುವರೇ .—

ಕೈಗಾ ಅಣು ವಿಜ್ಞಾನ ಕೇಂದ್ರದ ಬಗ್ಗೆ ಆ ಭಾಗದ ಜನರ ಮನಸ್ಸಿನಲ್ಲಿ ಮೂಡಿರುವ ಭಯವನ್ನು ನಿವಾರಿಸಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಕೇಂದ್ರ ಸರ್ಕಾರವು ಸಾಕಷ್ಟು ಸುರಕ್ಷಣಾ ಕ್ರಮಗಳನ್ನು ತೆಗೆದುಕೊಳ್ಳುವ ಭರವಸೆ ಇದೆ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳು

ಬಳ್ಳಾರಿ ಜಿಲ್ಲೆಯ ಹಗರಿ ಪಾನ್ಯಾಂ ಸಿಮೆಂಟ್ ಕಾರ್ಖಾನೆಗೆ ವಿದ್ಯುತ್ ಸರಬರಾಜು ಮಾಡುವ ಬಗ್ಗೆ

೧೯೦(೩೩೪) ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ).—ಮಾನ್ಯ ವಾಣಿಜ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ;—

ಅ) ೧೯೭೪ರಲ್ಲಿ ಬಳ್ಳಾರಿ ಜಿಲ್ಲೆಯ ಹಗರಿಯಲ್ಲಿ ಪಾನ್ಯಾಂ ಸಿಮೆಂಟ್ ಮತ್ತು ವಿನರಲ್ ಕಾರ್ಖಾನೆ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಸದರಿ ಕಾರ್ಖಾನೆಗೆ ವಿದ್ಯುತ್ ಕಡಿತದಿಂದ ಕಾರ್ಖಾನೆಯು ಉತ್ಪಾದನೆ ಕಡಿಮೆಯಾಗಿ ಕಾರ್ಖಾನೆಯಲ್ಲಿ ಖಾಯಂ ಆಗಿ ಕೆಲಸ ಮಾಡುತ್ತಿರುವ ಕಾರ್ಮಿಕರಿಗೆ ಕೆಲಸವಿಲ್ಲದೆ ಮನೆಗೆ ಹೋಗುವ ಸಂಭವ ಉದ್ಭವವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?